ದಿನಾಂಕಃ 19-02-2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ- 2 ನೇ ಎದುರುದಾರ ಪರ ಶ್ರೀ ಎನ್.ಡಿ. ವಕೀಲರಿಂದ

ನಾನು ಬ್ಯಾಂಡ ಸಮೂಹದಲ್ಲಿ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ದಾಖಲೆ ಇಲ್ಲ ಹಾಗಾಗಿ ಹಾಜರುಪಡಿಸಿಲ್ಲ. ನನ್ನ ಪ್ರತಿ ತಿಂಗಳ ಆದಾಯ ರೂ. 20,000/- ಇತ್ತು ಎಂದು ತೋರಿಸಲು ದಾಖಲೆ ಇಲ್ಲ. ನಾನು ಬ್ಯಾಂಡ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ ಎಂದು ಹೇಳಿದ್ದು ಸದರಿ ಬ್ಯಾಂಡ ಕಂಪನಿ ನೊಂದಣಿ ಮಾಡಿಸಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಬ್ಯಾಂಡ ಸಮೂಹದಲ್ಲಿ ಕೆಲಸ ಮಾಡುತ್ತಿದ್ದೆ ಹಾಗೂ ನನ್ನ ಪ್ರತಿ ತಿಂಗಳ ಆದಾಯ ರೂ. 20,000/- ಇತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

ಅಪಘಾತ ಆದಾಗ ನಾನು ಟೆಂಪೋದಲ್ಲಿ ಪ್ರಯಾಣಿಸುತ್ತಿದ್ದೆ ಎಂದರೆ ಸರಿ. ಆ ಸಮಯದಲ್ಲಿ ಆ ಟೆಂಪೋದಲ್ಲಿ ಸುಮಾರು 20 ಜನರು ಇದ್ದರು ಎಂದರೆ ಸಾಕ್ಷಿಯು 12 ಜನರು ಇದ್ದರು ಎಂದು ನುಡಿದಿದ್ದಾರೆ. ಆ ದಿನ ಟೆಂಪೋದಲ್ಲಿ 20 ಜನ ಪ್ರಯಾಣಿಸುತ್ತಿದ್ದರೂ ಸಹ ನಾನು 12 ಜನ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಪೋಲಿಸರು ಸಲ್ಲಿಸಿದ ಅಂತಿಮ ವರದಿಯಲ್ಲಿ ತೋರಿಸಿರುವ ಗಾಯಾಳುಗಳ ಪಟ್ಟಿಯನ್ನು ನಾನು ನೋಡಿರುತ್ತೇನೆ. ಸದರಿ ಅಂತಿಮ ವರದಿಯಲ್ಲಿ 18 ಜನ ಗಾಯಾಳುಗಳನ್ನು ತೋರಿಸಿದ್ದು ಅವರೆಲ್ಲರುೂ ನನಗೆ ಪರಿಚಿತರು ಎಂದರೆ ಸರಿ. ಆ ದಿನ ಹೆಚ್ಚಿ ನ ಪ್ರಯಾಣಿಕರನ್ನು ಟೆಂಪೋದಲ್ಲಿ ಹತ್ತಿಸಿದ್ದರಿಂದ 1 ನೇ ಎದುರುದಾರ ಅಜಾಗರೂಕತೆಯನ್ನು ತೋರಿದ್ದಾ ಎಂದರೆ ಸರಿಯಲ್ಲ.

ಅಪಘಾತ ದೇವಗಿರಿ ಕ್ರಾಸ್ ಹತ್ತಿರ ಇರುವ ರಸ್ತೆಯ ಹಂಪ್ಸ ಹತ್ತಿರ ಆಗಿರುತ್ತದೆ ಎಂದರೆ ಸರಿ. ಅಪಘಾತ ರಾತ್ರಿ ಆಗಿರುತ್ತದೆ ಎಂದರೆ ಸಾಕ್ಷಿಯು ಬೆಳಗಿನ ಜಾವ ಆಗಿರುತ್ತದೆ ಎಂದು ನುಡಿದಿದ್ದಾರೆ. ಅಪಘಾತ ಆದಾಗ ಕತ್ತಲೆ ಇತ್ತು ಎಂದರೆ ಸರಿ. ರಾಷ್ಟ್ರಿಯ ಹೆದ್ದಾರಿಯಲ್ಲಿ ಚಲಿಸುವ ವಾಹನಗಳಿಗೆ ವೇಗದ ಮಿತಿ ಇಲ್ಲ ಎಂದರೆ ಸರಿಯಲ್ಲ. ಅಪಘಾತ ಆದ ಸ್ಥಳದ ರಸ್ತೆಯಲ್ಲಿ ವಾಹನ ಚಾಲನೆಯ ವೇಗದ ಮಿತಿ ಸೂಚಿಸುವ ಬೋರ್ಡ ಇರಲಿಲ್ಲ. ಅಪಘಾತ ಸ್ಥಳದ ರಸ್ತೆಯಲ್ಲಿ ಇರುವ ಹಂಪ್ಸ ದಾಟಿದ ನಂತರ ವಾಹನ ಎಡಗಡೆಗೆ ಚಲಿಸಬೇಕು ಎಂದರೆ ಸರಿ. ರಸ್ತೆಯ ಎಡತಿರುವು ತೆಗೆದುಕೊಂಡು ವಾಹನ ಚಲಿಸಲು ರಸ್ತೆಯ ಹಂಪ್ಸ ಹಾಕಲಾಗಿದೆ ಎಂದರೆ ಸರಿ. ರಸ್ತೆ ಹಂಪ್ಸ ಹಾಕಿರುವ ಬಗ್ಗೆ ಸೂಚನಾ ಫಲಕ ಇರಲಿಲ್ಲ ಎಂದರೆ ನಾನು ನೋಡಿರುವುದಿಲ್ಲ. ರಾಷ್ಟ್ರಿಯ ಹೆದ್ದಾರಿ ಪ್ರಾಧಿಕಾರದವರು ರಸ್ತೆ ಹಂಪ್ಸ ಇರುವ ಬಗ್ಗೆ ಹಾಗೂ ರಸ್ತೆ ತಿರುವು ಇರುವ ಬಗ್ಗೆ ಸೂಚನಾ ಫಲಕ ಹಾಕದಿರುವ ಕಾರಣ ಅಪಘಾತ ಆಗಿತ್ತು ಎಂದರೆ ಅದು ನಮಗೆ ಸಂಬಂಧ ಇಲ್ಲ. ಅಪಘಾತ ಟೆಂಪೋ ಚಾಲಕ, ರಾಷ್ಟ್ರಿಯ ಹೆದ್ದಾರಿ ಪ್ರಾಧಿಕಾರ ಹಾಗೂ ರಸ್ತೆ ಕಾಮಗಾರಿ ಮಾಡಿದ ಗುತ್ತಿಗೆದಾರನ ಅಜಾಗರೂಕತೆಯಿಂದಾಗಿ ಆಗಿರುತ್ತದೆ ಎಂದರೆ ಸರಿಯಲ್ಲ.

ಅಪಘಾತದಲ್ಲಿ ನನ್ನ ಬಲಗಾಲಿಗೆ, ಎರಡೂ ಕೈಗಳಿಗೆ ಹಾಗೂ ತಲೆಗೆ ಗಾಯಗಳಾಗಿದ್ದವು. ಅಪಘಾತ ಆದ ನಂತರ ನನ್ನನ್ನು ಚಿಕಿತ್ಸೆಗಾಗಿ ಹಾವೇರಿ ಜಿಲ್ಲಾ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಅಲ್ಲಿ ವೈದ್ಯರು ನನಗೆ ಪ್ರಾಥಮಿಕ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿಯ ಕೀಮ್ಸ ಆಸ್ಪತ್ರೆಗೆ ಹೋಗಲು ಸೂಚಿಸಿದರು.

ಕೀಮ್ಸ ಆಸ್ಪತ್ರೆಯಲ್ಲಿ ನನ್ನ ಕಾಲಿನ ಕ್ಷ-ಕಿರಣ ತೆಗೆದು ಸ್ಕ್ಯಾನಿಂಗ್ ಮಾಡಿ ರಕ್ತ ಕಡಿಮೆ ಇರುವುದರಿಂದ ರಕ್ತ ಬೇಕು ಎಂದು ಹೇಳಿದರು ಹಾಗೂ ನಾಲ್ಕು ಬಾರಿ ಶಸ್ತ್ರ ಚಿಕಿತ್ಸೆ ಮಾಡಿ ನನ್ನನ್ನು 4 ತಿಂಗಳು ಒಳರೋಗಿಯಾಗಿ ದಾಖಲಿಸಿಕೊಂಡು ಚಿಕಿತ್ಸೆ ನೀಡಿದ್ದಾರೆ. ನಾನು ಕೀಮ್ಸ ಆಸ್ಪತ್ರೆಯಲ್ಲಿ 4 ತಿಂಗಳು ಒಳರೋಗಿಯಾಗಿ ದಾಖಲಾಗಿ ಚಿಕಿತ್ಸೆ ಪಡೆದಿದ್ದೇನೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನಗೆ ಸಾಮಾನ್ಯ ಸ್ವರುಪದ ಗಾಯಗಳು ಮಾತ್ರ ಆಗಿದ್ದವು ಎಂದರೆ ಸರಿಯಲ್ಲ.

ಕೀಮ್ಸ ಆಸ್ಪತ್ರೆಯಲ್ಲಿ ಉಚಿತವಾಗಿ ಚಿಕಿತ್ಸೆ ನೀಡುತ್ತಾರೆ ಎಂದರೆ ಸಾಕ್ಷಿಯು ಅವರ ಹತ್ತಿರ ಇಲ್ಲದ ಔಷಧಿಗಳನ್ನು ಹಾಗೂ ರಕ್ತವನ್ನು ಹೊರಗಡೆಯಿಂದ ತರಿಸಿಕೊಂಡಿದ್ದಾರೆ ಎಂದು ನುಡಿದಿದ್ದಾರೆ. ಕೀಮ್ಸ ಆಸ್ಪತ್ರೆಯಲ್ಲಿ ರಕ್ತ ಸಂಗ್ರಹಣಾ ನಿಧಿ ಇದೆ ಎಂದರೆ ಸರಿ. ಕೀಮ್ಸ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವವರು ರಕ್ತ ಬೇಕಾದಲ್ಲಿ ಒಬ್ಬರ ರಕ್ತ ಕೊಟ್ಟರೆ ರೋಗಿಗೆ ಬೇಕಾದಂತಹ ರಕ್ತವನ್ನು ಸಂಗ್ರಹಣಾ ನಿಧಿಯಿಂದ ಕೊಡುತ್ತಾರೆ ಎಂದರೆ ಸರಿ. ಕೀಮ್ಸ ಆಸ್ಪತ್ರೆಯವರು ಹೊರಗಡೆಯಿಂದ ರಕ್ತ ತರಿಸಿಕೊಂಡು ಚಿಕಿತ್ಸೆ ನೀಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಂಪೂರ್ಣ ಗುಣಮುಖನಾದ ನಂತರ ನನ್ನನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಿದ್ದರು ಎಂದರೆ ಸರಿಯಲ್ಲ.

ಕೀಮ್ಸ ಆಸ್ಪತ್ರೆಯಿಂದ ಬಿಡುಗಡೆಗೊಂಡ ನಂತರ ನಾನು ಹಾವೇರಿ ಖಾಸಗಿ ಆಸ್ಪತ್ರೆ ಹಾಗೂ ಬ್ಯಾಡಗಿ ಸರಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದೇನೆ. ನನ್ನ ಸ್ವಂತ ಊರು

ಸವಣೂರು ಎಂದರೆ ಸರಿ. ಇವತ್ತು ನಾನು ಮನೆಯಿಂದ ನಡೆದುಕೊಂಡು ನ್ಯಾಯಾಲಯಕ್ಕೆ ಬಂದಿದ್ದೆನೆ ಎಂದರೆ ಸರಿಯಲ್ಲ. ಸಾಕ್ಷಿಯು ನಾನು ಅಟೋರಿಕ್ಷಾದಲ್ಲಿ ಬಂದಿದ್ದೆನೆ ಎಂದು ನುಡಿದಿದ್ದಾರೆ. ನ್ಯಾಯಾಲಯದ ಗೇಟನಿಂದ ನ್ಯಾಯಾಲಯದವರೆಗೆ ನಾನು ಒಬ್ಬನೇ ನಡೆದುಕೊಂಡು ಬಂದಿದ್ದೆನೆ ಎಂದರೆ ಸರಿ.

ಬ್ಯಾಡಗಿ ಸರಕಾರಿ ಆಸ್ಪತ್ರೆಯಲ್ಲಿ ವೈದ್ಯರು ನನ್ನ ಕ್ಷ-ಕಿರಣ ಮಾಡಿ ಔಷಧಿ ಬರೆದುಕೊಟ್ಟರು ಹಾಗೂ ಕೀವು ಬರುತ್ತಿರುವುದರಿಂದ ಮತ್ತೆ ಶಸ್ತ್ರಚಿಕಿತ್ಸೆ ಮಾಡಬೇಕು ಎಂದು ತಿಳಿಸಿದರು. ಆ ಬಗ್ಗೆ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಅಂಗನ್ಯೂನ್ಯತೆ ಪ್ರಮಾಣಪತ್ರ ಬರೆಸಿಕೊಂಡು ಬಂದಿದ್ದೆನೆ ಎಂದರೆ ಸರಿಯಲ್ಲ. ನಿಪಿ 13 ಬರೆದುಕೊಡುವಾಗ ವೈದ್ಯರು ನನ್ನ ಕ್ಷ-ಕಿರಣ ಮಾಡಿ ತಪಾಸಣೆ ಮಾಡಿ ಬರೆದುಕೊಟ್ಟಿದ್ದಾರೆ. ನಾನು ಕೀಮ್ಸ ಆಸ್ಪತ್ರೆಯ ವೈದ್ಯರಿಗೆ ಅಂಗನ್ಯೂನ್ಯತೆ ಪ್ರಮಾಣಪತ್ರ ಕೊಡಲು ಕೇಳಿಲ್ಲ. ಅದನ್ನು ಕೇಳಲು ನನಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನನಗೆ ಓಡಾಡಲು ಬರುತ್ತಿರಲಿಲ್ಲ ಎಂದು ನುಡಿದಿದ್ದಾರೆ. ನನಗೆ ಓಡಾಡಲು ಬರದಿದ್ದರೂ ಸಹ ನಾನು ಬ್ಯಾಡಗಿಗೆ ಹೋಗಿ ಚಿಕಿತ್ಸೆ ಪಡೆದಿದ್ದೆನೆ ಎಂದರೆ ಸರಿ ..ಕೀಮ್ಸ ಆಸ್ಪತ್ರೆಯ ವೈದ್ಯರು ನನಗೆ ಯಾವುದೇ ಅಂಗನ್ಯೂನ್ಯತೆ ಉಂಟಾಗಿಲ್ಲ ಎಂದು ಹೇಳಿದ್ದರಿಂದ ನಾನು ಬ್ಯಾಡಗಿ ಆಸ್ಪತ್ರೆಗೆ ಹೋಗಿ ಸುಳ್ಳು ಅಂಗನ್ಯೂನ್ಯತೆ ಪ್ರಮಾಣಪತ್ರ ಬರೆಸಿಕೊಂಡು ಬಂದಿದ್ದೆನೆ ಎಂದರೆ ಸರಿಯಲ್ಲ.

ನಾನು ಮೊದಲಿನಂತೆ ನನ್ನ ಎಲ್ಲಾ ದಿನನಿತ್ಯದ ಕೆಲಸಗಳನ್ನು ಮಾಡಿಕೊಳ್ಳುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ನಿಂತುಕೊಂಡು ನ್ಯಾಯಾಲಯದಲ್ಲಿ ಸಾಕ್ಷಿ

ಎಂ ವಿ ಸಿ ನಂ. 419/2020
ಪಿ ಡಬ್ಲು 1

ನುಡಿಯುತ್ತಿದ್ದೆನೆ ಎಂದರೆ ಸರಿ. ನನ್ನ ಚಿಕಿತ್ಸೆಗಾಗಿ ರೂ. 2,50,000/- ಖರ್ಚು ಮಾಡಿದ್ದೆನೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಬಿಲ್ಲಗಳಲ್ಲಿ ಸಹಿ ಇಲ್ಲ ಎಂದರೆ ಸಾಕ್ಷಿಯು ಔಷಧಿ ಅಂಗಡಿಯವರು ಅವುಗಳನ್ನು ಕೊಟ್ಟಿದ್ದಾರೆ ಎಂದು ನುಡಿದಿದ್ದಾರೆ. ವೆಂಕಟೇಶ್ವರ ಎಂಟರಪ್ರೈಸಸ ಬಿಲ್ಲು ಸೃಷ್ಟಿತ್ತ ದಾಖಲೆ ಎಂದರೆ ಸರಿಯಲ್ಲ. ನಿಪಿ 14 ನನಗೆ ಸಂಬಂಧಪಟ್ಟಿದ್ದು ಅಲ್ಲ ಎಂದರೆ ಸರಿಯಲ್ಲ. ನಾನು ಮೊದಲಿನಂತೆ ಆರೋಗ್ಯವಾಗಿ ಓಡಾಡಿಕೊಂಡು ಇರುವುದರಿಂದ ನನಗೆ ಯಾವುದೇ ಅದಾಯದ ನಷ್ಟ ಆಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ಸದರಿ ಸಾಕ್ಷಿದಾರರ ಸಾಕ್ಷ್ಯವನ್ನು ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ)